

ಅರುಣ ಪಿ. ಭಟ್ಟ

## ವಾರಭವಿಷ್ಯ: 23.9.2021ರಿಂದ 29.9.2021ರವರೆಗೆ




ಮನಸ್ಸು ತುಂಬಾ ಚಂಚಲತೆಯಿಂದ ಕೂಡಿರುತ್ತದೆ. ತುಂಬಾ ಸಂಯಮದಿಂದ ಇರಿ. ಹಣಕಾಸಿನ ಬಗ್ಗೆ ತುಸು ಬಿಗಿಯಾಗಿರಿ. ಮಕ್ಕಳಿಂದ ಸಂತೋಷದ ಸಮಾಚಾರ ಕೇಳುವಿರಿ. ಪುಣ್ಯಕ್ಷೇತ್ರ ದರ್ಶನ ಮಾಡುವ ಯೋಚನೆ ಫಲಿಸುತ್ತದೆ. ಕಲಾವಿದರು– ಸಾಹಿತಿಗಳಿಗೆ ಸಾಮಾಜಿಕ ಮನ್ನಣೆ, ಸನ್ಮಾನ ಯೋಗವಿದೆ. ಕೋರ್ಟ್ ವ್ಯಾಜ್ಯಗಳಿದ್ದರೆ ಹಿನ್ನಡೆ ಆಗುವ ಸಂಭವ ಇದೆ. ಶುಭದಿನ 25. ಚಂಡಿ ಪಾರಾಯಣ ಮಾಡಿರಿ.




ಈ ವಾರ ನಿಮ್ಮ ಮನಸ್ಸು ಸಾಮಾಜಿಕ ಕೆಲಸ ಮಾಡುವತ್ತ ಹೆಚ್ಚಿನ ಆಸಕ್ತಿ ಹೊಂದುತ್ತದೆ. ನೀವು ಮಾಡುವ ಸಾಮಾಜಿಕ ಕಾರ್ಯ ಅರ್ಹರಾದವರಿಗೆ ತಲುಪುತ್ತದೆ. ಇದರಿಂದ ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ, ಗೌರವ ಹೆಚ್ಚಾಗುತ್ತದೆ. ಸ್ವತಃ ನೀವೂ ಕೂಡ ನಿಮ್ಮಲ್ಲಾದ ಬದಲಾವಣೆ ಗಮನಿಸಿ ಸಂತೋಷಗೊಳ್ಳುವಿರಿ. ವಾರವಿಡೀ ಸಂತಸ. ಶುಭದಿನ 26. ರಾಘವೇಂದ್ರ ಸ್ವಾಮಿಗಳ ಭಜನೆ ಮಾಡಿರಿ.




ಬಂಧು ಮಿತ್ರರಲ್ಲಿ ನಿಮ್ಮ ಸ್ನೇಹ ಗಾಢವಾಗುವುದು. ದಾಯಾದಿಗಳ ಜೊತೆ ಆಸ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಕಿರಿಕಿರಿ ಉಂಟಾಗುತ್ತದೆ. ಪತ್ನಿಯ ಆರೋಗ್ಯ ಕೆಡುವ ಸಂಭವ ಇದೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರಿಗೆ ಒಳ್ಳೆಯ ಗೌರವ ಲಭಿಸುವುದು. ಸೋದರರಿಂದ ಲಾಭ. ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿನ್ನಡೆ ಉಂಟಾಗುತ್ತದೆ. ಕಚೇರಿ ವ್ಯವಹಾರಗಳಿಗೆ ಉತ್ತಮ ಸಮಯ. ಶುಭದಿನ 28. ದೇವಿ ಸ್ತೋತ್ರ ಪಠಿಸಿರಿ.




ನಿಮ್ಮ ಶ್ರಮದ ದುಡಿಮೆಗೆ ಉತ್ತಮ ಪ್ರತಿಫಲ ಸಿಗಲಿದೆ. ವೈವಿಧ್ಯಮಯ ಆಭರಣ, ವಾಹನ ಖರೀದಿಯ ಯೋಜನೆಗೆ ಯೋಗ ಕೂಡಿ ಬರಲಿದೆ. ಉದ್ಯೋಗಸ್ಥರು ಸೇವಾ ಹಿರಿತನದ ಮೇಲೆ ಬಡ್ತಿ ಪಡೆಯುವ ಸಂಭವ. ಕೃಷಿ– ವ್ಯವಸಾಯದಿಂದ ಲಾಭ ಸಿಗಲಿದೆ. ವಿನೋದ ಮನೋರಂಜನೆಗೆ ಖರ್ಚು. ಶಿಕ್ಷಣಕ್ಕೆ ಹಣ ವಿನಿಯೋಗವಾಗಲಿದೆ. ಮಾತೃ ಸೌಖ್ಯ. ಬಂಧುಗಳ ಸಹಕಾರ. ಶುಭದಿನ 24. ದುರ್ಗಾ ಸಹಸ್ರನಾಮ ಪಠಿಸಿರಿ.




ನಿರುದ್ಯೋಗಿಗಳಿಗೆ ನೂತನ ಉದ್ಯೋಗ ಪ್ರಾಪ್ತಿ. ಮನೆಯಲ್ಲಿ ಶುಭಕಾರ್ಯ ನೆರವೇರಲಿದೆ. ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ದೂರದ ಊರಿಗೆ ಪ್ರಯಾಣ ಬೆಳೆಸುತ್ತೀರಿ. ವಿದೇಶ ಪ್ರಯಾಣ ಮಾಡುವ ಬಯಕೆ ಇದ್ದವರಿಗೆ ಆ ಯೋಗ ಒದಗಿಬರಲಿದೆ. ನಿಮ್ಮ ಕುಟುಂಬದ ಜವಾಬ್ದಾರಿ ಹೆಚ್ಚಾಗುವುದು. ಮಕ್ಕಳಿಗೆ ಅನಾರೋಗ್ಯ ಸಂಭವ. ಸ್ತ್ರೀ ಮೂಲಕ ಧನಲಾಭ. ಶುಭದಿನ 26. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ನೂತನ ಉದ್ಯೋಗ ಆರಂಭಿಸುವವರಿಗೆ ಶುಭ ಸೂಚನೆ ಸಿಗಲಿದೆ. ಉದ್ಯೋಗದಲ್ಲಿ ಸ್ವಯಂ ಪ್ರತಿಭೆಯಿಂದ ಮುಂದೆ ಬರುತ್ತೀರಿ. ಮನೆಯಲ್ಲಿ ಮಂಗಳ ಕಾರ್ಯ ನೆರವೇರುವ ಸಂಭವ ಇದೆ. ವಾಹನ ವಸ್ತ್ರಾಭರಣ ಖರೀದಿ ಮಾಡುತ್ತೀರಿ. ಸಂಗೀತ ಸಿನಿಮಾ ಕ್ಷೇತ್ರದವರಿಗೆ ಲಾಭ. ಉದ್ಯೋಗದಲ್ಲಿ ವಿರೋಧಿಗಳ ಕಾಟ. ಒಳ್ಳೆಯ ವಾಗ್ಮಿ ಅನ್ನಿಸಿಕೊಳ್ಳುವಿರಿ. ಶುಭದಿನ 25. ವಿಷ್ಣು ಸಹಸ್ರನಾಮ ಓದಿರಿ.




ಚಂಚಲ ಮನಸ್ಸಿನಿಂದ ಕಿರಿಕಿರಿ ಉಂಟಾಗುತ್ತದೆ. ಹಣ ಅನವಶ್ಯಕವಾಗಿ ಖರ್ಚು ಆಗುತ್ತದೆ. ಕೆಮ್ಮು, ಕಫದಿಂದ ಆರೋಗ್ಯ ಕೆಡುತ್ತದೆ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ನೌಕರರಿಗೆ ವರ್ಗಾವಣೆ ಸಂಭವ. ಕ್ರಯವಿಕ್ರಯಗಳಲ್ಲಿ ಮೋಸವಾಗುವ ಸಂಭವ ಜಾಗ್ರತೆಯಿಂದಿರಿ. ಬರತಕ್ಕ ಹಣ ಬರುವುದು. ಉದ್ಯೋಗದಲ್ಲಿ ಏರುಪೇರು ಆಗುತ್ತದೆ. ಶುಭದಿನ 24. ಲಕ್ಷ್ಮೀನಾರಾಯಣಹೃದಯ ಪಾರಾಯಣ ಮಾಡಿರಿ.




ಜೀವನದಲ್ಲಿ ಹೊಸ ಹಾದಿಯ ಬಾಗಿಲೊಂದು ತೆರೆದುಕೊಳ್ಳುವ ಸಂಭವವಿದೆ. ಸರ್ಕಾರ ಮತ್ತು ಸಾರ್ವಜನಿಕ ಕಾರ್ಯಗಳಿಗೆ ವಿಪರೀತ ಖರ್ಚಾಗುವುದು. ತಂದೆಯ ಆರೋಗ್ಯದಲ್ಲಿ ಏರುಪೇರು. ಉದ್ಯೋಗದ ನಿಮಿತ್ತ ಪರಸ್ಥಳ ತಿರುಗಾಟ ಜಾಸ್ತಿಯಾಗಿರುವುದು. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆತ್ಮೀಯರಿಂದಲೇ ಮೋಸವಾಗುವ ಸಂಭವ ಎಚ್ಚರವಹಿಸಿ. ಶುಭದಿನ 29. ಶಿವ ಸಹಸ್ರನಾಮ ಓದಿರಿ.




ಕಲಾವಿದರು ಸಾಹಿತಿಗಳಿಗೆ ಶುಭವಾಗಲಿದೆ. ವ್ಯವಸಾಯಗಾರರಿಗೆ ಉತ್ತಮ ಲಾಭ ಲಭಿಸಲಿದೆ. ಪುಣ್ಯಕ್ಷೇತ್ರ ದರ್ಶನ ಭಾಗ್ಯ ಉಂಟು. ಗುರು ಹಿರಿಯರಿಂದ ಆಶೀರ್ವಾದ ಲಭಿಸುವುದು. ಉದ್ಯೋಗದಲ್ಲಿ ಅಪರಿಚಿತರಿಂದ ತೊಂದರೆ ಆಗುವ ಅಪಾಯ ಇದೆ ಎಚ್ಚರ ತೆಗೆದುಕೊಳ್ಳುವುದು ಕ್ಷೇಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಕೋರ್ಟ್ ವ್ಯವಹಾರಗಳಲ್ಲಿ ಹಿನ್ನಡೆ. ಶುಭದಿನ 27. ಶಂಕರ ಸ್ತೋತ್ರ ಪಠಣ ಮಾಡಿರಿ.




ಉದ್ಯೋಗದಲ್ಲಿ ಪ್ರಗತಿಯನ್ನು ಕಾಣುತ್ತೀರಿ. ಹೆಚ್ಚುವರಿಯಾಗಿ ವಿಶೇಷ ಸಂಪಾದನೆ ಇರುತ್ತದೆ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಕೊಂಚ ಹಿನ್ನಡೆ ಆಗಬಹುದು. ಹೆಂಡತಿ ಮಕ್ಕಳಿಂದ ಧನಲಾಭ ಪ್ರಾಪ್ತಿ. ಭೂ ವ್ಯವಹಾರ– ಲೇವಾದೇವಿ ನಂಬಿದವರೇ ಶತ್ರುಗಳಾಗುವರು ಎಚ್ಚರ. ನಿಮ್ಮ ಕೈಯಿಂದ ಮಂಗಳ ಕಾರ್ಯ ನಡೆಯುವುದರಿಂದ ಸಂತೋಷ ಉಂಟಾಗಲಿದೆ. ಶುಭದಿನ 26. ಸುಬ್ರಹ್ಮಣ್ಯ ಜಪ ಮಾಡಿರಿ.




ವ್ಯಾಪಾರ ವ್ಯವಹಾರದಲ್ಲಿ ಲಾಭ ಉಂಟಾಗುತ್ತದೆ. ದೂರ ಪ್ರಯಾಣದಲ್ಲಿ ಎಚ್ಚರಿಕೆ ವಹಿಸಿ. ದಾಯಾದಿಗಳಿಂದ ತೊಂದರೆ ಆಗುತ್ತದೆ. ಬಂಧುಗಳಲ್ಲಿ ಜಗಳ ಕಾಡುತ್ತದೆ. ಮನೆಯಲ್ಲಿನ ಕೌಶಲ್ಯಕ್ಕೆ ಸಮತೋಲನವನ್ನು ಸಂಯಮದಿಂದ ಕಾಪಾಡಿಕೊಳ್ಳಿ. ಖರ್ಚು ವೆಚ್ಚಗಳ ಬಗ್ಗೆ ನಿಗಾವಹಿಸಿ, ಅನಗತ್ಯ ಹಣ ಖರ್ಚಾಗುವ ಸಾಧ್ಯತೆ ಇದೆ. ಪರೋಪಕಾರದಿಂದ ತೊಂದರೆ. ಶುಭದಿನ 24. ಹನುಮಾನ್ ಚಾಲಿಸ್ ಓದಿರಿ.




ಉನ್ನತ ವ್ಯಾಸಂಗಕ್ಕೆ ಯೋಗ್ಯಕಾಲ ನಿಮಗೆ ಒದಗಿಬರಲಿದೆ. ಆಸ್ತಿಯಿಂದ ಅಧಿಕ ಧನ ಲಾಭವಾಗಲಿದೆ. ಉದ್ಯೋಗದಲ್ಲಿ ಒಳ್ಳೆಯ ಬೆಳವಣಿಗೆ ಇದೆ. ಯಜ್ಞ ಯಾಗಾದಿ ಕಾರ್ಯಗಳಲ್ಲಿ ಭಾಗವಹಿಸುವಿರಿ. ಹೊಸ ವಸ್ತ್ರ ಖರೀದಿಮಾಡುವ ಸಂತೋಷವನ್ನು ಅನುಭವಿಸುತ್ತೀರಿ. ಕುಟುಂಬದವರ ಜೊತೆ ಬಾಂಧವ್ಯ ಉತ್ತಮವಾಗಿರುತ್ತದೆ. ಪ್ರವಾಸದಿಂದ ಸಂತಸ. ಶುಭದಿನ 28. ಸೌಂದರ್ಯಲಹರಿ ಪಠಿಸಿರಿ.